


## ಚಂದ್ರಲೋಕದ ದಿಗ್ಭ್ರಮೆ!

ಜ.17ರ 'ಸುಧಾ' ಮುಖಪುಟ ಲೇಖನ ಸುಧಾ ಹೆಗಡೆಯವರ 'ಚಂದ್ರಲೋಕದ ಪ್ರವಾಸ' ಚೆನ್ನಾಗಿತ್ತು. ಈ ಕುರಿತ ವಿವರಗಳು ದಿಗ್ಭ್ರಮೆ ಮೂಡಿಸಿದವು.

–ಬಿ.ಎಸ್.ಸತೀಶ್, ಮೈಸೂರು/ ಎಸ್.ನಿತ್ಯ, ಮೂಡಬಿದಿರೆ/ ಎಚ್.ಆನಂದಕುಮಾರ್, ಚಿತ್ರದುರ್ಗ

## ಮೊದಲೇ ಹೊಳೆಯಬೇಕಿತ್ತು!

'ಸಿಂಪಲ್ ಇಂಡಿಯಾ, ಸೂಪರ್ ಲುಕ್!' ಕೆ.ಗಣೇಶ್ ಕೋಡೂರು ಅವರ ಚಿತ್ರ–ಬರಹ ನೋಡಿದಾಗ ಇಂತಹ ವಿಷಯಗಳೆಲ್ಲ ಯುವಜನಾಂಗದ ತಲೆಯಲ್ಲಿ ಮೊದಲೇ ಹೊಳೆಯಬೇಕಲ್ಲವೆ ಎನಿಸಿತು.

–ಕಾಳೀಹುಂಡಿ ಶಿವಕುಮಾರ್, ಮೈಸೂರು

## ಮಹಿಳೆಯರ ವಾಸ್ತವ ಚಿತ್ರಣ

ಸುಮಾ ರಮೇಶ್ ಹಾಸನ ಅವರು 'ಓ ಹೌಸ್ ವೈಫಾ?' ಲೇಖನದಲ್ಲಿ ದುಡಿಯುವ ಮಹಿಳೆಯರ ಕರುಣಾಜನಕ ಸ್ಥಿತಿಯನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಚಿತ್ರಿಸಿದ್ದಾರೆ.

–ನಾರಾಯಣ ಯಾಜಿ, ಶಿರಾಲಿ/ ವಿಭಾ ಮುರಳೀಧರ್, ತುಮಕೂರು/ ಎ.ಕೆ.ಪಟ್ಟಾಭಿ, ಬೆಂಗಳೂರು

## ಡಾ. ಛೆಬ್ಬಿ ಉತ್ತರಕ್ಕೆ ಮೆಚ್ಚುಗೆ

'ಸುಖೀಭವ'ದಲ್ಲಿ ಪ್ರಕಟವಾಗುವ ಪ್ರಶ್ನೋತ್ತರಗಳನ್ನು ಓದಿ ಸಾಮಾನ್ಯವಾಗಿ ನಾನು ಮುಜುಗರ ಪಟ್ಟುಕೊಳ್ಳುತ್ತಿದ್ದೆ. ಆದರೆ ಜ.17ರ 'ಸುಖೀಭವ'ದಲ್ಲಿ ಓದುಗರೊಬ್ಬರು ವಿವಾಹಿತ ಸ್ತ್ರೀ ಸಂಪರ್ಕದ ಬಗ್ಗೆ ಕೇಳಿದ ಪ್ರಶ್ನೆಗೆ ಛಬ್ಬಿಯವರ ಉತ್ತರ ನನ್ನ ಮೆಚ್ಚುಗೆ ಗಳಿಸಿತು! ಇಂತಹ ಉತ್ತರಗಳಿಂದಲಾದರೂ ಓದುಗರು ಜಾಗೃತರಾದರೆ ಸಾಕು.

–ತರಂಗಿಣಿ, ತುಮಕೂರು

## 'ಕಮಲಿ' ವಿಭಿನ್ನ, ಮನೋಜ್ಞ ಕಥೆ

ಪಾರ್ವತಿ ಪಿಟಗಿಯವರ 'ಕಮಲಿ' ಕಥೆ ಗ್ರಾಮೀಣ ಜೀವನಕ್ಕೆ ಜಾನಪದ ಭಾಷ್ಯ ಕೊಟ್ಟು ನಗರ ಜೀವನದೊಂದಿಗೆ ಹೋಲಿಸಿದ ವಿಭಿನ್ನ ಕಥಾವಸ್ತು ಹೊಂದಿದೆ. ಸಮಾಜಕ್ಕೆ ತೊಂದರೆಯಾಗದಂತೆ ಪರ ಊರಿನಲ್ಲಿ ಜೀವನ ರಥ ಎಳೆಯುವ ಬಂದವ್ವ ಹಾಗೂ ಕಮಲಿಯ ನಿರ್ಧಾರ ಮನೋಜ್ಞವಾಗಿದೆ.

–ಸಂಜೀವ ಸಿ. ಗೌರ, ಹಾಸನ

## ಬಾಳ ಇಷ್ಟ ಆತು ನೋಡ್ರಿ...

'ಕಮಲಿ' ಕಥಿ ಪಿಟಗಿಯವರು ಬಾಳ ಚಂದ ಬರದಾರ ರ‍್ರೀ... ಉತ್ತರ ಕರ್ನಾಟಕದ ಆಡು ಭಾಷಿ ನಮಗ ಭಾಳ ಚಲೋ ಅನಿಸ್ತು. 'ಎಳೆಯರ ಅಂಗಳ'ದ ಕಥಿ, ಕವನ ಮಕ್ಕಳಿಗೂ, ದೊಡ್ಡವರಿಗೂ ಬಾಳ ಇಷ್ಟ ಆಗತಾವ ನೋಡ್ರೀ...

–ಬಿ.ಎಸ್.ಮುಳ್ಳೂರ, ಹಲಗತ್ತಿ

## ಮಕ್ಕಳಿಗೆ ನೀತಿಬೋಧಕ

ಎಳೆಯರ ಅಂಗಳ ವಿಭಾಗದಲ್ಲಿ ಎಂ.ಸಿ.ಅಂಟಿನ ಅವರು ಮಕ್ಕಳು 'ಐಸ್‌ಕ್ರೀಂ ತಿನ್ನಬಾರದೆ?' ಎಂದು ಬರೆದ ಕಥೆ ನೀತಿಬೋಧಕವಾಗಿದೆ.

–ಎ.ಪಿ.ರಂಗನಾಥ್, ಮೈಸೂರು

## ವರ್ಧಮಾನ ಪ್ರಶಸ್ತಿಗೆ ಆಹ್ವಾನ

ಮೂಡಬಿದ್ರೆಯ ವರ್ಧಮಾನ ಸಾಹಿತ್ಯ ಪ್ರಶಸ್ತಿ ಪೀಠವು 2007ರಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರದ (ಕಾವ್ಯ, ಕಾದಂಬರಿ, ನಾಟಕ, ಸಣ್ಣಕತೆ, ವಿಮರ್ಶೆ ಇತ್ಯಾದಿ) ಸಾಹಿತ್ಯ ಕೃತಿಗಳನ್ನು ಪ್ರಶಸ್ತಿಗೆ ಆಹ್ವಾನಿಸಿದೆ.

'ವರ್ಧಮಾನ ಸಾಹಿತ್ಯ ಪ್ರಶಸ್ತಿ'ಯು ಹಿರಿಯ ಸಾಹಿತಿಗಳ ಕೃತಿಗೆ ಮೀಸಲಿದ್ದರೆ, 'ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ'ಯು ತಮ್ಮ ಮೊದಲನೆಯ, ಎರಡನೆಯ ಇಲ್ಲವೇ ಮೂರನೆಯ ಕೃತಿಯ ಮೂಲಕ ಮಹತ್ವದ್ದನ್ನು ಸಾಧಿಸಿದ ಹೊಸ ಪೀಳಿಗೆಯ ಸಾಹಿತಿಗಳಿಗಾಗಿ ಇದೆ. ಆಸಕ್ತರು ಕೃತಿಯ 3 ಪ್ರತಿಗಳನ್ನು ಫೆ. 15ರ ಒಳಗಾಗಿ ಮುನಿರಾಜು ರೆಂಜಾಳ, ಸಹ ನಿರ್ದೇಶಕರು ವರ್ಧಮಾನ ಸಾಹಿತ್ಯ ಪ್ರಶಸ್ತಿ ಪೀಠ, ಜೆ.ಜೆ. ಕಾಲೇಜು, ಮೂಡಬಿದ್ರೆ. ದ.ಕ.–574227 ಇಲ್ಲಿಗೆ ಕಳಿಸಬೇಕು.

ಹೆಚ್ಚಿನ ಮಾಹಿತಿಗೆ: 9449936232 ಸಂಪರ್ಕಿಸಿ.

